# ಕರ್ನಾಟಕ ಗಮಕ ಕಲಾ ಪರಿಷತ್ತು (ರಿ)

ನಂ.8, "ಅಗಸ್ತ್ಯಎನ್‌ಕ್ಲೇವ್", ನೆಲಮಹಡಿ, 13ನೇ ಮುಖ್ಯರಸ್ತೆ, ಶ್ರೀನಗರ,
1ನೇ ಬ್ಲಾಕ್, ಬಿ.ಎಸ್.ಕೆ. 1ನೇ ಹಂತ,ಬೆಂಗಳೂರು-560050


## ಗಮಕ ಕಾಜಾಣ ಪರೀಕ್ಷೆ ಮಾದರಿ ಪ್ರಶ್ನೆ ಪತ್ರಿಕೆ

**ಅಂಕಗಳು : 100** **ಸಮಯ : 3 ಗಂಟೆ**

---

**1. ಕಠಿಣ ಪದಗಳ ಅರ್ಥ ಬರೆಯಿರಿ : 1 x 10 = 10**

(1) ನಾರಿ (2) ಅಸುರ (3) ಶರಧಿ (4) ಭೂಪಾಲ (5) ನಿಕರ
(6) ಉರಗ (7) ನೊರಲು (8) ರಿಪು (9) ತಟಾಕ (10) ಪಲ್ಲವ

**2. ಬಿಟ್ಟ ಪದಗಳನ್ನು ತುಂಬಿಸಿ ಬರೆಯಿರಿ : 1 x 05 = 05**

ಅ) __________ ಅಲ್ಲಮ ಪ್ರಭುವಿನ ಅಂಕಿತ.
ಆ) "ಸಕಳೇಶ್ವರ ದೇವ" __________ ಅವರ ಅಂಕಿತ.
ಇ) ಗಿರಿಜಾ ಕಲ್ಯಾಣ __________ ನ ಕೃತಿ.
ಈ) ದ್ವಾರಕಾಪುರ ವರ್ಣನೆ __________ ರವರು ಮಾಡಿದ್ದಾರೆ.
ಉ) ಪದ್ಯದ ಕೊನೆಯ ಅಕ್ಷರವನ್ನು __________ ಎಂದು ಕರೆಯುತ್ತಾರೆ.

**3. ಗುಂಪಿಗೆ ಸೇರದ ಪದವನ್ನು ಸೇರಿಸಿ ಬರೆಯಿರಿ: 1 x 05 = 05**

ಅ) ಕರಣ, ಅಂಘ್ರಿ, ನಯನ, ಭುವನ
ಆ) ಅಲ್ಲಮಪ್ರಭು, ಬಸವಣ್ಣ, ವಾದಿರಾಜ, ಷಡಕ್ಷರದೇವ.
ಇ) ಶರಧಿ, ಕಡಲು, ಕನಲು, ವಾರಿಧಿ.
ಈ) ಚಂಪಕಮಾಲಾ, ಮಂದಾನಿಲ, ಮಹಾಸ್ರಗ್ಧರ, ಮತ್ತೇಭವಿಕ್ರೀಡಿತ
ಉ) ಅರವಿಂದದಳಾಕ್ಷ, ಪಂಕಜನೇತ್ರ, ರಮೇಶ, ತ್ರಿನಯನ.

**4. ಈ ವಾಕ್ಯದಲ್ಲಿರುವ ಸರಿತಪ್ಪನ್ನು ಗುರುತಿಸಿ: 1 x 05 = 05**

ಅ) "ಅಂಬಿಕಾತನಯದತ್ತ' ದ.ರಾ.ಬೇಂದ್ರೆಯವರ ಕಾವ್ಯನಾಮ
ಆ) " ಗಿರಿಜಾಕಲ್ಯಾಣ" ರಗಳೆಯ ಕಾವ್ಯ.
ಇ) "ಗೋಕರ್ಣಮಹಿಮಾದರ್ಶ" ಕನಕದಾಸರ ರಚನೆ.
ಈ) "ಅದ್ಭುತ ರಾಮಾಯಣಂ" ಪಂಪ ರಚನೆ.
ಉ) "ನಳಚರಿತ್ರೆ" ಭಾಮಿನಿ ಷಟ್ಪದಿಯಲ್ಲಿದೆ.

**5. ಹೊಂದಿಸಿ ಬರೆಯಿರಿ: 1 x 05 = 05**

| | | | |
|---|---|---|---|
| 1) | ಚನ್ನಬಸವಣ್ಣ | ಅ) | ಆಶುಕವಿ |
| 2) | ಆರುಸಾಲಿನ ಪದ್ಯ | ಆ) | ಶೈವ ಕವಿ |
| 3) | ರನ್ನ | ಇ) | ಬ್ರಾಹ್ಮಣಕವಿ |
| 4) | ನರಹರಿ | ಈ) | ಷಟ್ಪದಿ |
| 5) | ಪಂಪ | ಉ) | ಗದಾಯುದ್ಧ |
| 6) | ಪಂಪ | ಊ) | ಆದಿಕವಿ |

**6. ಬಿಟ್ಟಿರುವ ಜಾಗವನ್ನು ಸೂಕ್ತ ಪದದಿಂದ ತುಂಬಿಸಿ : 1 x 05 = 05**

ಅ) ಉದಯಕಾಲದಲ್ಲಿ ಹಾಡುವ ರಾಗ __________ (ಮಲಯಮಾರುತ, ಮಧ್ಯಮಾವತಿ, ನಾಟ)
ಆ) ಪ್ರತಿಸಾಲಿನಲ್ಲಿ ಮೂರು ಮಾತ್ರೆಯ ನಾಲ್ಕು ಗಣಗಳ ರಗಳೆಯು ________ (ಲಲಿತ, ಮಂದಾನಿಲ, ಉತ್ಸಾಹ)
ಇ) ನಾಲ್ಕು ಮಾತ್ರೆಯ ಮೂರು ಗಣಗಳ ಪದ್ಯವು _______ (ಕಂದಪದ್ಯ, ವಾರ್ಧಕ ಷಟ್ಪದಿ, ಭಾಮಿನಿ ಷಟ್ಪದಿ)
ಈ) ಭರಂ, ನಭಭಂ, ರಲಗಂ ನೆಗಳ್ದಿರಲ್ _____ ಎನ್ನುವರು. (ಉತ್ಪಲಮಾಲೆ, ಚಂಪಕಮಾಲೆ, ಮತ್ತೇಭವಿಕ್ರೀಡಿತ)
ಉ) ನವರಸಗಳಲ್ಲಿ __________ ರಸವು 'ರಸಗಳ ರಾಜ' ಎನಿಸಿದೆ. (ಶೋಕರಸ, ಶೃಂಗಾರರಸ, ರೌದ್ರರಸ)

**7. ಈ ಕೆಳಕಂಡವರ ಎರಡೆರಡು ಕೃತಿಗಳನ್ನು ಹೆಸರಿಸಿ : 1 x 06 = 06**

1) ಹರಿಹರ 2) ಕನಕದಾಸರು 3) ದ.ರಾ.ಬೇಂದ್ರೆ

**8. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: 3 x 03 = 09**

ಅ) ಸತಿಯನ್ನು ಅಗಲಿದ ನಳನ ಮನಸ್ಸನ್ನು ಚಿತ್ರಿಸಿ?
ಆ) ಮೇನೆಯ ಮನಸ್ಸಿನ ಬಯಕೆ ಹೇಗಿತ್ತು?
ಇ) ದ.ರಾ.ಬೇಂದ್ರೆಯವರು ಅಹಲ್ಯೆಯನ್ನು ಹೇಗೆ ಬಣ್ಣಿಸಿದ್ದಾರೆ?

**9. ಈ ಕೆಳಗಿನ ವಾಕ್ಯಗಳ ಸಂದರ್ಭಗಳನ್ನು ತಿಳಿಸಿ: 3 x 04 = 12**

ಅ) ನಾನಾ ಭಕ್ಷ್ಯ ಭೋಜ್ಯಂಗಳ ಪರಮ ಸುಮ್ಮನದೆ ಬಡಿಸಿದರೊಲಿದು
ಆ) ಲೋಕದೊಳಗಗ್ಗಳೆಯು ಮಹಿಪರನೇಕರವರೂಳಗಾರನೊಲ್ಲದೆ ನೂಕಿ ತನ್ನನೆ ಒಲಿದು
ಇ) ಹರನಾತ್ಮ ಲಿಂಗಮಂ ಪಡೆದ ಲಂಕಾಪತಿಯು ಪರಮಹರ್ಷದಿ ನಲಿದು ನರ್ತನನಗೈದು

**10. 'ಗಮಕ' ದ ಬಗ್ಗೆ ಟಿಪ್ಪಣಿ ಬರೆಯಿರಿ. 5**

**11. 'ವ್ಯಾಖ್ಯಾನಕಾರ' ನ ಕರ್ತವ್ಯಗಳ ಬಗ್ಗೆ ತಿಳಿಸಿ. 5**

**12. ನಿಮ್ಮ ಪಠ್ಯದಲ್ಲಿರುವ ಯಾರಾದರೂ ಇಬ್ಬರು ಕವಿಗಳ ಬಗ್ಗೆ ತಿಳಿಸಿ, ಅವರ ಕೃತಿಯ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ. 6**

**13. ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸನ್ನು ವಿವರಿಸಿ : 10**

"ದೊಡ್ಡ ಹೊಟ್ಟೆಯ ಗೂನುಬೆನ್ನಿನ
ಅಡ್ಡ ಮೋರೆಯ ಗಂಟುಮೂಗಿನ
ದೊಡ್ಡ ಕೈಕಾಲುಗಳ ಉದುರಿದ ರೋಮಮೀಸೆಗಳ
ಜಡ್ಡು ದೇಹದ ಗುಜ್ಜು ಗೊರಲಿನ
ಗಿಡ್ಡ ರೂಪಿನ ಹರುಕು ಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ॥"

**14. ಈ ಕೆಳಗಿನ ಪದ್ಯದಕ್ಕೆ ತಾತ್ಪರ್ಯ ಬರೆಯಿರಿ : 6**

"ಮತಿಯತನೆ ನಿನಗಾಂ ಕೃತಜ್ಞನಾಗಿರ್ಪೆನ್ನೈ
ಜತನದಿಂ ಪಡಿದಿರ್ಕೆ ಜೋಕೆ ಜೋಪಾನಮಂ
ದತಿವಿನದಿಂಪೇಳ್ದು ಶಿವನಾತ್ಮಲಿಂಗಮಂ ವಟುಹಸ್ತಕಿತ್ತಸುರನು
ಕ್ಷಿತಿಗೆ ಸೋಂಕಿಸಬೇಡ ಕರವನಲುಗಿಸಬೇಡ
ರತುನಮಿದನೋಳ್ಪೆನೆಂದತ್ತಿತ್ತ ಕೈನೀಡಿ
ಪತನಗೈಸಲ್ಬೇಡ ಶೀಘ್ರ ಮೈತರ್ಪೆನೆಂದಸುರ ಶರನಿಧಿಗೈದಿದಂ॥"

**15. ವಿವರಿಸಿ : 2 x 03 = 06**

ಅ) ಇಂತುತಪೋಬೀಜಂ ಬಿತ್ತ ಭೂಮಿಯೊಳ್ ಬೇರೂರಿ
ಆ) ಅಯೋಧ್ಯೆಯು ನಳನಿಗೆ ಕಂಡ ಬಗೆ.

* * * * * * * * *